# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಸದಸ್ಯರ ಹೆಸರು | ಶ್ರೀ ಗೋವಿಂದರಾಜು (ವಿಧಾನಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1249 |
| ಉತ್ತರಿಸಬೇಕಾದ ದಿನಾಂಕ | 29-12-2022. |
| ಉತ್ತರಿಸ ಬೇಕಾದವರು | ನಗರಾಭಿವೃದ್ಧಿ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೋಲಾರದದಲ್ಲಿರುವ ಯರಗೋಳ್ ಡ್ಯಾಂ ಯೋಜನೆಗೆ ನಿಗದಿಪಡಿಸಿರುವ ಅನುದಾನವೆಷ್ಟು; | ಯರಗೋಳ್ ಡ್ಯಾಂ ಯೋಜನೆಯನ್ನು ಎರಡು ಹಂತಗಳಲ್ಲಿ ಕೈಗೊಂಡಿದ್ದು ವಿವರ ಈ ಕೆಳಕಂಡಂತಿದೆ.<br>1. **ಮೊದಲನೇ ಹಂತ** (ರಾಜ್ಯ ಸರ್ಕಾರದ ಅನುದಾನ): 500 ಎಂ.ಸಿ.ಎಫ್.ಟಿ ಸಾಮರ್ಥ್ಯದ ಅಣೆಕಟ್ಟೆ ನಿರ್ಮಾಣ ಹಾಗೂ ಪೂರಕ ಕಾಮಗಾರಿಗಳು. ನಿಗದಿಪಡಿಸಿರುವ ಅನುದಾನ ರೂ.160.00 ಕೋಟಿಗಳು.<br>2. **ಎರಡನೇ ಹಂತ** (ಕೇಂದ್ರ ಸರ್ಕಾರದ ಅನುದಾನ ಯು.ಐ.ಡಿ.ಎಸ್.ಎಸ್.ಎಂ.ಟಿ ಯೋಜನೆ): ಏರು ಕೊಳವೆ ಮಾರ್ಗ, ವಿತರಣಾ ಕೊಳವೆ ಮಾರ್ಗ, ಮೇಲ್ಮಟ್ಟದ ಜಲಸಂಗ್ರಹಗಾರಗಳು, ಶುದ್ಧೀಕರಣ ಘಟಕಗಳು, ಪಂಪಿಂಗ್ ಮಷಿನರಿ ಕಾಮಗಾರಿಗಳು, 11 ಕೆ.ವಿ ವಿದ್ಯುತ್ ವಾಹಕ ಕಾಮಗಾರಿಗಳು ಹಾಗೂ ಪೂರಕ ಕಾಮಗಾರಿಗಳು. ನಿಗದಿಪಡಿಸಿರುವ ಅನುದಾನ ರೂ.79.92 ಕೋಟಿಗಳು. |
| ಆ) | ಈ ಯೋಜನೆಯಿಂದ ಜಿಲ್ಲೆಯ ಎಷ್ಟು ತಾಲ್ಲೂಕುಗಳಿಗೆ ನೀರಾವರಿ ಸೌಲಭ್ಯ ದೊರೆಯಲಿದೆ; | ಈ ಯೋಜನೆಯಿಂದ ಕೋಲಾರ ಜಿಲ್ಲೆಯ ಕೋಲಾರ ನಗರ, ಮಾಲೂರು ಮತ್ತು ಬಂಗಾರಪೇಟೆ ಪಟ್ಟಣ ಹಾಗೂ ಮಾರ್ಗ ಮಧ್ಯದ 45 ಹಳ್ಳಿಗಳಿಗೆ ಕುಡಿಯುವ ನೀರಿನ ಸೌಲಭ್ಯ ದೊರೆಯಲಿದೆ. |
| ಇ) | ಈ ಯೋಜನೆಯ ಪ್ರಾರಂಭದಲ್ಲಿ ನಿಗದಿಪಡಿಸಿರುವ ಅನುದಾನಕ್ಕಿಂತ ಹೆಚ್ಚು ಅನುದಾನವನ್ನು ಬಿಡುಗಡೆ ಮಾಡಲಾಗಿದೆಯೇ; ಇದರ ಗುತ್ತಿಗೆ ಪಡೆದುಕೊಂಡಂತಹ ಸಂಸ್ಥೆ ಯಾವುದು; ಗುತ್ತಿಗೆದಾರರಿಗೆ ಸರ್ಕಾರದ ವತಿಯಿಂದ ಪೂರ್ಣ ಪ್ರಮಾಣದಲ್ಲಿ ಹಣ ಬಿಡುಗಡೆ ಮಾಡಲಾಗಿದೆಯೇ; | **ಅ) ಮೊದಲನೇ ಹಂತ** (ರಾಜ್ಯ ಸರ್ಕಾರದ ಅನುದಾನ): 500 ಎಂ.ಸಿ.ಎಫ್.ಟಿ ಸಾಮರ್ಥ್ಯದ ಅಣೆಕಟ್ಟೆ ನಿರ್ಮಾಣ ಹಾಗೂ ಪೂರಕ ಕಾಮಗಾರಿಗಳಿಗೆ ಪ್ರಾರಂಭದಲ್ಲಿ ರೂ.160.00 ಕೋಟಿಗಳನ್ನು ನಿಗದಿಪಡಿಲಾಗಿದ್ದು, ಕಾಮಗಾರಿಯನ್ನು ಕೈಗೊಳ್ಳುವ ಸಂದರ್ಭದಲ್ಲಿ ಅನೇಕ ಕಾರಣಗಳಿಂದ ಕಾಮಗಾರಿ ಮೊತ್ತವು ಹೆಚ್ಚಾಗಿರುವುದರಿಂದ ರೂ.180.70 ಕೋಟಿಗಳಿಗೆ ಪರಿಷ್ಕೃತ ಅಂದಾಜು ಪಟ್ಟಿಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ರವರು ಸಿದ್ದಪಡಿಸಿ ಸರ್ಕಾರಕ್ಕೆ ಆಡಳಿತಾತ್ಮಕ ಅನುಮೋದನೆಗಾಗಿ ಸಲ್ಲಿಸಿದ್ದು, ಸದರಿ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. |

500 ಎಂ.ಸಿ.ಎಫ್.ಟಿ ಸಾಮರ್ಥ್ಯದ ಅಣೆಕಟ್ಟೆ ನಿರ್ಮಾಣ ಕಾಮಗಾರಿ ಹಾಗೂ ಪೂರಕ ಕಾಮಗಾರಿಗಳನ್ನು ಕೈಗೊಳ್ಳಲು ಟೆಂಡರ್ ಮುಖಾಂತರ ಗುತ್ತಿಗೆ ಪಡೆದ ಸಂಸ್ಥೆ ಮೆ// ರಾಮ್ಕಿ ಇನ್ಫ್ರಾಸ್ಟ್ರಕ್ಚರ್ ಲೀ, ಹೈದರಾಬಾದ್.

ಗುತ್ತಿಗೆದಾರರಿಗೆ ಈವರೆವಿಗೂ ಕೈಗೊಂಡ ಕಾಮಗಾರಿಗಳಿಗೆ ಪೂರ್ಣ ಪ್ರಮಾಣದಲ್ಲಿ ಹಣ ಬಿಡುಗಡೆ ಮಾಡಿರುವುದಿಲ್ಲ. ಉಳಿಕೆ ಕಾಮಗಾರಿಗಳಾದ ನಿರ್ವಹಣಾ ಸಿಬ್ಬಂಧಿಯ ವಸತಿ ಗೃಹಗಳ ನಿರ್ಮಾಣ (ಅಣೆಕಟ್ಟೆ ಬಳಿ, ಬಂಗಾರಪೇಟೆ ಮತ್ತು ಕೋಲಾರ ಜಲ ಶುದ್ಧೀಕರಣ ಘಟಕಗಳ ಬಳಿ) ಸೆಕ್ಯುರಿಟಿ ಚೆಕ್ ಪೋಸ್ಟ್ ಗಳ ನಿರ್ಮಾಣ ಮತ್ತು ಅಣೆಕಟ್ಟೆ ಪರಿಮಿತಿಯಲ್ಲಿ ವಿಧ್ಯುತ್ ದೀಪಗಳನ್ನು ಅಳವಡಿಸುವ ಕಾಮಗಾರಿಗಳನ್ನು ಕೈಗೊಳ್ಳಲು ಟೆಂಡರ್ ಆಹ್ವಾನಿಸಿ ಗುತ್ತಿಗೆದಾರರನ್ನು ನೇಮಿಸಬೇಕಾಗಿರುತ್ತದೆ.

**ಆ) ಎರಡನೇ ಹಂತ** (ಕೇಂದ್ರ ಸರ್ಕಾರದ ಅನುದಾನ ಯು.ಐ.ಡಿ.ಎಸ್.ಎಸ್.ಎಂ.ಟಿ ಯೋಜನೆ): ಏರು ಕೊಳವೆ ಮಾರ್ಗ, ವಿತರಣಾ ಕೊಳವೆ ಮಾರ್ಗ, ಮೇಲ್ಮಟ್ಟದ ಜಲಸಂಗ್ರಹಗಾರಗಳು, ಶುದ್ಧೀಕರಣ ಘಟಕಗಳು, ಪಂಪಿಂಗ್ ಮಿಷಿನರಿ ಕಾಮಗಾರಿಗಳು, 11 ಕೆ.ವಿ ವಿಧ್ಯುತ್ ವಾಹಕ ಕಾಮಗಾರಿಗಳು ಹಾಗೂ ಪೂರಕ ಕಾಮಗಾರಿಗಳಿಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 23 ಪಿ.ಆರ್.ಜೆ 2019, ದಿನಾಂಕ: 16-01-2021 ರಲ್ಲಿ ರೂ.127.27 ಕೋಟಿಗಳ ಪರಿಷ್ಕೃತ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ.

ಸದರಿ ಯೋಜನೆಯಡಿ ವಿವಿಧ ಕಾಮಗಾರಿಗಳನ್ನು 8 ಪ್ಯಾಕೇಜ್ ಗಳ ಮುಖಾಂತರ ಕೈಗೊಳ್ಳಲಾಗಿದೆ.

1. **ಪ್ಯಾಕೇಜ್ 1:** ಏರು ಕೊಳವೆ ಮಾರ್ಗ, ವಿತರಣಾ ಕೊಳವೆ ಮಾರ್ಗ, ಮೇಲ್ಮಟ್ಟದ ಜಲಸಂಗ್ರಹಗಾರಗಳು, ಕೋಲಾರ ನಗರದಲ್ಲಿ 30.42 ಎಂ.ಎಲ್.ಡಿ ನೀರು ಶುದ್ಧೀಕರಣ ಘಟಕ ನಿರ್ಮಾಣ ಕಾಮಗಾರಿ ಹಾಗೂ ಪೂರಕ ಕಾಮಗಾರಿಗಳಿಗೆ – ಮೇ// ಇ.ಪಿ.ಐ.ಎಲ್, ಹೈದರಾಬಾದ್.
2. **ಪ್ಯಾಕೇಜ್ 2:** 4 ಸ್ಥಳಗಳಲ್ಲಿ ರೈಲ್ವೆ ಹಳಿ ಕ್ರಾಸಿಂಗ್ ಕಾಮಗಾರಿಗಳಿಗೆ ಮೆ// ಎಂ.ಎನ್.ರಮೇಶ್, ತುಮಕೂರು.
3. **ಪ್ಯಾಕೇಜ್ 3:** ಬಂಗಾರಪೇಟೆ ಪಟ್ಟಣದಲ್ಲಿ 13.00 ಎಂ.ಎಲ್.ಡಿ ನೀರು ಶುದ್ಧೀಕರಣ ಘಟಕ ನಿರ್ಮಾಣ ಹಾಗೂ ಪೂರಕ ಕಾಮಗಾರಿಗಳಿಗೆ ಮೆ// ಅರುಣ್ ಇಂಜಿನಿಯರಿಂಗ್, ಬೆಂಗಳೂರು.

| | | |
|---|---|---|
| | | 4. **ಪ್ಯಾಕೇಜ್ 4:** ಬಂಗಾರಪೇಟೆ ಪಟ್ಟಣದಲ್ಲಿ 13.00 ಎಂ.ಎಲ್.ಡಿ ನೀರು ಶುದ್ಧೀಕರಣ ಘಟಕಕ್ಕೆ ಕಾಂಪೌಡ್ ನಿರ್ಮಿಸುವ ಕಾಮಗಾರಿಗೆ ಮೆ// ಸಿ.ಆರ್.ಅರವಿಂದ್, ಬೆಂಗಳೂರು.<br>5. **ಪ್ಯಾಕೇಜ್ 5:** ಕೋಲಾರ ನಗರದಲ್ಲಿ 30.42 ಎಂ.ಎಲ್.ಡಿ ನೀರು ಶುದ್ಧೀಕರಣ ಘಟಕಕ್ಕೆ ಕಾಂಪೌಡ್ ನಿರ್ಮಿಸುವ ಕಾಮಗಾರಿಗೆ ಮೆ// ಸಿ.ಆರ್.ಅರವಿಂದ್, ಬೆಂಗಳೂರು.<br>6. **ಪ್ಯಾಕೇಜ್ 6:** ಯರಗೋಳ್ ಡ್ಯಾಂ ನ ಜಾಕ್ ವೆಲ್ ನಲ್ಲಿ, ಬಂಗಾರಪೇಟೆಯ ನೀರು ಶುದ್ಧೀಕರಣ ಘಟಕದಲ್ಲಿ, ಕೋಲಾರದ ನೀರು ಶುದ್ಧೀಕರಣ ಘಟಕದಲ್ಲಿ ಪಂಪಿಂಗ್ ಮಿಷಿನರೀ ಒದಗಿಸಿ ಅಳವಡಿಸುವ ಕಾಮಗಾರಿ ಹಾಗೂ ಪೂರಕ ಕಾಮಗಾರಿಗಳಿಗೆ ಮೆ// ಫ್ಲೋ ಮೋರ್ ಲೀ., ಬೆಂಗಳೂರು.<br>7. **ಪ್ಯಾಕೇಜ್ 7:** 11 ಕೆ.ವಿ ವಿದ್ಯುತ್ ವಾಹಕ ಕಾಮಗಾರಿಗೆ – ಮೆ// ಏಲೆಕ್ಟ್ರಿಕಲ್ ಏನರ್ಜಿ ಇಂಡಿಯಾ ಪ್ರೈ. ಲೀ., ಬೆಂಗಳೂರು<br>8. **ಪ್ಯಾಕೇಜ್ 8:** ಕೋಲಾರ ನಗರದಲ್ಲಿ 4 ಸಂಖ್ಯೆ ಮೇಲ್ಮಟ್ಟದ ಜಲ ಸಂಗ್ರಹಾಗಾರಗಳ ನಿರ್ಮಾಣ, ಕೋಲಾರ ನಗರದಲ್ಲಿ ಫೀಡರ್ ಹಾಗೂ ವಿತರಣಾ ಕೊಳವೆ ಮಾರ್ಗವನ್ನು ಒದಗಿಸಿ ಅಳವಡಿಸುವುದು ಹಾಗೂ ಪೂರಕ ಕಾಮಗಾರಿಗಳಿಗೆ ಮೆ// ಸುಜಲಾ ಸ್ಟ್ರಕ್ಚರ್ಸ್, ಬೆಂಗಳೂರು.<br><br>ಗುತ್ತಿಗೆದಾರರಿಗೆ ಹಂತ ಹಂತವಾಗಿ ಕಾಮಗಾರಿ ಕೈಗೊಂಡಂತೆ ಹಣವನ್ನು ಬಿಡುಗಡೆ ಮಾಡಲಾಗುತ್ತಿದೆ. |
| ಈ) | ಸದರಿ ಡ್ಯಾಂ ನಲ್ಲಿ ಎಷ್ಟು ನೀರನ್ನು ಶೇಖರಣೆ ಮಾಡಬಹುದು ಹಾಗೂ ಡ್ಯಾಂ ಪೂರ್ಣ ಪ್ರಮಾಣದಲ್ಲಿ ಭರ್ತಿಯಾದರೂ ಇದುವರೆಗೂ ಉದ್ಘಾಟನೆ ಮಾಡದಿರಲು ಕಾರಣಗಳೇನು; ಸಾರ್ವಜನಿಕರಿಗೆ ಯಾವಾಗ ಕುಡಿಯುವ ನೀರನ್ನು ಪೂರೈಸಲು ಸರ್ಕಾರ ಉದ್ದೇಶ ಹೊಂದಿದೆ? | ಡ್ಯಾಂ ನಲ್ಲಿ 500 ಎಂ.ಸಿ.ಎಫ್.ಟಿ ಪ್ರಮಾಣದಲ್ಲಿ ನೀರನ್ನು ಶೇಖರಣೆ ಮಾಡಬಹುದಾಗಿರುತ್ತದೆ. ಎರಡನೇ ಹಂತದ ಯೋಜನೆಯ ಪೈಪ್ ಲೈನ್, ನೀರು ಶುದ್ಧೀಕರಣ ಘಟಕಗಳು, ಪಂಪಿಂಗ್ ಮಿಷಿನರಿ ಕಾಮಗಾರಿ, 11 ಕೆವಿ ವಿದ್ಯುತ್ ವಾಹಕ ಕಾಮಗಾರಿ ಹಾಗೂ ಇತರೆ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿದ್ದು, ಸದರಿ ಯೋಜನೆಯಡಿ ಕೋಲಾರ ನಗರದಲ್ಲಿ 3 ಮೇಲ್ಮಟ್ಟದ ಜಲ ಸಂಗ್ರಹಾಗಾರಗಳನ್ನು ನಿರ್ಮಿಸಿದ್ದು, ಪ್ರಸ್ತುತ ಕೋಲಾರ ನಗರದಲ್ಲಿ ನಿರ್ಮಾಣ ಹಂತದಲ್ಲಿರುವ 4 ಮೇಲ್ಮಟ್ಟದ ಜಲ ಸಂಗ್ರಹಾಗಾರಗಳನ್ನು ಹೊರತುಪಡಿಸಿ ಉಳಿದ ಕಾಮಗಾರಿಗಳನ್ನು ಮಾರ್ಚ್ 2023 ರೊಳಗೆ ಚಾಲನೆಗೊಳಿಸಿ ಸಾರ್ವಜನಿಕರಿಗೆ ಕುಡಿಯುವ ನೀರನ್ನು ಪೂರೈಸಲು ಸರ್ಕಾರದಿಂದ ಉದ್ದೇಶಿಸಲಾಗಿದೆ. |

ಸಂಖ್ಯೆ: ನಅಇ 210 ಯುಎಂಎಸ್ 2022

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

**(ಬಿ.ಎ. ಬಸವರಾಜ)**
**ನಗರಾಭಿವೃದ್ಧಿ ಸಚಿವರು**